ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1533**
ಸದಸ್ಯರ ಹೆಸರು	:	ಶ್ರೀ ಎನ್.ಎಸ್.ಬೋಸರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	19-03-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಯಚೂರಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ(ಕೆಪಿಸಿ) ವತಿಯಿಂದ ನಿರ್ಮಾಣ ಮಾಡಿರುವ ಆರ್‌ಟಿಪಿಎಸ್ ಹಾಗೂ ವೈಟಿಪಿಎಸ್‌ನಿಂದ ಉತ್ಪತ್ತಿಯಾಗುತ್ತಿರುವ ಒಟ್ಟು ವಿದ್ಯುತ್ತಿನ ಪ್ರಮಾಣ ಎಷ್ಟು; ಈ ಯೋಜನೆಗೆ ಭೂಸ್ವಾದೀನ ಪಡೆದುಕೊಂಡಿರುವ ಭೂಮಿ ಎಷ್ಟು;</td><td>ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವೈ.ಟಿ.ಪಿ.ಎಸ್ ಮತ್ತು ಆರ್.ಟಿ.ಪಿ.ಎಸ್ ವಿದ್ಯುತ್ ಕೇಂದ್ರಗಳಿಂದ ಕಳೆದ ಮೂರು ವರ್ಷಗಳ ಉತ್ಪಾದನೆಯಾದ ವಿದ್ಯುತ್ತಿನ ವಿವರ ಕೆಳಕಂಡಂತ್ತಿವೆ:

<table>
<tr><th>ವರ್ಷ</th><th colspan="2">ಉತ್ಪಾದನೆ ದಲಯೂ.ಗಳಲಿ</th></tr>
<tr><td></td><td>ಆರ್.ಟಿ.ಪಿ.ಎಸ್ (1720 ಮೆ.ವ್ಯಾ ಘಟಕ 1–8)</td><td>ವೈ.ಟಿ.ಪಿ.ಎಸ್ (1600 ಮೆ.ವ್ಯಾ ಘಟಕ 1&2)</td></tr>
<tr><td>2019-20 (01.04.2019-02.03.2020)</td><td>7762.51</td><td>115.357</td></tr>
<tr><td>2018-19</td><td>8917.97</td><td>791.667</td></tr>
<tr><td>2017-18</td><td>10834.55</td><td>996.316</td></tr>
</table>

RTPS ಯೋಜನೆಗಾಗಿ 3126 ಎಕರೆ ಹಾಗೂ YTPS ಯೋಜನೆಗಾಗಿ 1125.39 ಎಕರೆ ಭೂಮಿಯನ್ನು ಭೂಸ್ವಾದೀನ ಪಡೆದುಕೊಳ್ಳಲಾಗಿದೆ.</td></tr>
<tr><td>ಆ)</td><td>ಈ ವಿದ್ಯುತ್ ಉತ್ಪಾದನೆಯಿಂದ ರಾಯಚೂರು ಭಾಗದಲ್ಲಿರುವ ರೈತರಿಗೆ ಸಿಕ್ಕಿರುವ ಸೌಲಭ್ಯಗಳೇನು/ ಹಾಗೂ ಸ್ಥಳೀಯರಿಗೆ ಸಿಕ್ಕಿರುವ ಉದ್ಯೋಗ ಎಷ್ಟು; ಶಕ್ತಿ ನಗರದಲ್ಲಿ ಪರಿಸರವನ್ನು ಕಾಪಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಈ ವಿದ್ಯುತ್ ಉತ್ಪಾದನೆಯಿಂದ ರಾಯಚೂರು ಭಾಗದಲ್ಲಿರುವ RTPS ಯೋಜನೆಯ 402 ಕುಟುಂಬಗಳಿಗೆ ಹಾಗೂ YTPS ಯೋಜನೆಯ 113 ಕುಟುಂಬಗಳ ಭೂ ಸಂತ್ರಸ್ತರಿಗೆ ಉದ್ಯೋಗಾವಕಾಶ ನೀಡಲಾಗಿದೆ.

ಅರಣ್ಯ ಮತ್ತು ಪರಿಸರ ಇಲಾಖೆಯ ನಿರ್ದೇಶನದಂತೆ, ಆರ್‌ಟಿಪಿಸ್ ಯೋಜನಾ ಪ್ರದೇಶದಲ್ಲಿ ಪರಿಸರವನ್ನು ಕಾಯ್ದುಕೊಳ್ಳಲು 1985 ರಿಂದ 2009-10 ರ ಸಾಲಿನವರೆಗೆ ಹಂತ ಹಂತವಾಗಿ ಒಟ್ಟು 388.79 Ha. (960.700 ಎಕರೆಗಳು) ಪ್ರದೇಶದಲ್ಲಿ ಗಿಡ ಮರಗಳನ್ನು ಬೆಳಸಲಾಗಿದೆ. ಮುಂದುವರೆದಂತೆ, ಆರ್‌ಟಿಪಿಎಸ್ ಯೋಜನಾ ಪ್ರದೇಶದಲ್ಲಿ ಲಭ್ಯವಿರುವ ಎಲ್ಲಾ ಜಾಗದಲ್ಲಿ ಗಿಡ-ಮರಗಳನ್ನು ನೆಡಲಾಗಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 07.12.2015ರಂದು ಹೊರಡಿಸಿದ ಗೆಜೆಟ್‌ನ ಕಂಡಿಕೆ ಎಸ್.ಓ.3305ರ ಪ್ರಕಾರ ಆರ್.ಟಿ.ಪಿ.ಎಸ್ ಮತ್ತು ವೈ.ಟಿ.ಪಿ.ಎಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ಕೊಳವೆ ಅನಿಲದ ಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ "ತೋಯ್ದ ಸುಣ್ಣದಕಲ್ಲಿನ ಕೊಳವೆ ಅನಿಲ ನಿರ್ಗಂಧಕೀಕರಣ ವ್ಯವಸ್ಥೆಯನ್ನು" ಅಳವಡಿಸಲು ಕರ್ನಾಟಕ e-portal ಮುಖಾಂತರ ವೈ.ಟಿ.ಪಿ.ಎಸ್, ಆರ್.ಟಿ.ಪಿ.ಎಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ದೇಶಿಯ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಪ್ರಸ್ತುತ ಎರಡೂ ಶಾಖೋತ್ಪನ್ನ ವಿದ್ಯುತ್‌ಕೇಂದ್ರದ ಟೆಂಡರ್‌ಗಳು ಮೌಲ್ಯಮಾಪನದ ಪ್ರಕ್ರಿಯೆ ಹಂತದಲ್ಲಿರುತ್ತವೆ.</td></tr>
</table>

....2

ಇ)	ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ತುಂಗಭದ್ರಾ ನದಿಗಳು ಇರುವುದರಿಂದ ರೈತರ ಪಂಪ್‌ಸೆಟ್‌ಗಳಿಗೆ ದಿನದ 12 ತಾಸು ವಿದ್ಯುತ್ ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ತಾಂತ್ರಿಕ ಅಡಚಣೆಗಳನ್ನು ಹೊರತುಪಡಿಸಿ ಹಗಲಿನ ವೇಳೆ 4 ಗಂಟೆಗಳ ಕಾಲ ಹಾಗೂ ರಾತ್ರಿಯ ವೇಳೆ 3 ಗಂಟೆಗಳಂತೆ ಒಟ್ಟು 7 ಘಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ವಿವಿಧ ಬ್ಯಾಚ್ ಗಳಲ್ಲಿ ಪೂರೈಸಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇರುವ ಪ್ರದೇಶಗಳಲ್ಲಿ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಕೃಷಿ ಪಂಪ್ ಸೆಟ್ ಗಳಿಗೆ ಸರಬರಾಜು ಮಾಡಲಾಗುತ್ತಿದೆ

ಸಂಖ್ಯೆ: ಎನರ್ಜಿ 71 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ